ಜಿಕೆವಿಕೆ: ಪ್ರತಿ ರೈತ ಸಂತೆಗೆ 25 ಸಾವಿರ ಜನ ಭೇಟಿ

ವಿವಿ ಆವರಣದಲ್ಲಿ ಪ್ರತಿ ತಿಂಗಳು 4ನೇ ಶನಿವಾರ ರೈತ ಸಂತೆ | ಇದುವರೆಗೆ 10 ರೈತ ಸಂತೆ ಪೂರ್ಣ, 1.37 ಕೋಟಿ ರೂ. ವಹಿವಾಟು ನಗರವಾಸಿಗಳಿಗೆ ತಾಜಾ ತರಕಾರಿ, ಹಣ್ಣು, ಸಿರಿಧಾನ್ಯ, ಕರಕುಶಲ ಉತ್ಪನ್ನ ಲಭ್ಯ | ನೇರ ಮಾರಾಟದಿಂದ ರೈತರು, ಗ್ರಾಹಕರಿಗೂ ಲಾಭ

■ ರಘು.ಕೆ.ಜಿ.

ಉದಯವಾಣಿ ಸಮಾಚಾರ

ಬೆಂಗಳೂರು: ಆಧುನಿಕತೆ ಆನ್‌ಲೈನ್ ಡಿಜಿಟಲ್ ಯುಗದಲ್ಲಿ ರೈತರು ಹಾಗೂ ನಗರದ ಗ್ರಾಹಕರನ್ನು ಒಟ್ಟಾಗಿ ಬೆಸೆದು ವೇದಿಕೆ ಬಲಪಡಿಸುವ ನಿಟ್ಟಿನಲ್ಲಿ ಹೆಬ್ಬಾಳದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸುತ್ತಿರುವ ವಿನೂತನ ಪರಿಕಲ್ಪನೆಯ ರೈತ ಸಂತೆಗೆ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ.

ನಗರದ ಮಂದಿಗೆ ಗ್ರಾಮೀಣ ಕೃಷಿ, ಶಿಕ್ಷಣ, ಪರಿಸರ ಜಾಗೃತಿಯೊಂದಿಗೆ ಬೆಳೆದ ಉತ್ಪನ್ನಗಳನ್ನು ಮಧ್ಯವರ್ತಿಗಳಿಲ್ಲದೇ ನೇರವಾಗಿ ರೈತರೇ ಗ್ರಾಹಕರಿಗೆ ತಲುಪಿಸಬೇಕು ಎಂಬ ಉದ್ದೇಶದಿಂದ ವಿಶ್ವವಿದ್ಯಾಲಯವು ರೈತರು ಹಾಗೂ ಸ್ವ-ಸಹಾಯ ಸಂಘಗಳ ಸಹಭಾಗಿತ್ವದಲ್ಲಿ ಪ್ರತಿ ತಿಂಗಳು ವಿವಿಯ ಆವರಣದಲ್ಲಿ ರೈತ ಸಂತೆ ಆಯೋಜಿಸುತ್ತಿದೆ. ಈ ವಿನೂತನ ಗ್ರಾಮೀಣ ಸೊಗಡಿನ ರೈತ ಸಂತೆ ಕಣ್ತುಂಬಿಕೊಳ್ಳಲು ರಾಜಧಾನಿಯ ನಗರವಾಸಿಗಳು ಅತ್ಯಧಿಕ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ.

ಆನ್‌ಲೈನ್ ವ್ಯವಸ್ಥೆಯ ಈ ಕಾಲದಲ್ಲಿ ಕ್ಷಣ ಮಾತ್ರದಲ್ಲಿ ತಮಗೆ ಬೇಕಾದ ವಸ್ತುಗಳು ಲಭ್ಯವಾದರೂ ಐಟಿ-ಬಿಟಿ, ಸೇರಿದಂತೆ ರಾಜಧಾನಿಯ ಸಾವಿರಾರು ನಗರವಾಸಿಗಳು ಸ್ವತಃ ರೈತ ಸಂತೆಗೆ ಭೇಟಿ ನೀಡಿ ಜಿಕೆವಿಕೆ ಪರಿಸರವನ್ನು ಆಸ್ವಾದಿಸುತ್ತಿದ್ದಾರೆ. ಈ ಮೂಲಕ ರೈತರಿಂದ ನಿಖರ ದರದಲ್ಲಿ ತಮಗೆ ಬೇಕಾದ ನೈಸರ್ಗಿಕ ತಾಜಾ ಹಣ್ಣು-ತರಕಾರಿ ಮತ್ತಿತರ ಮೌಲ್ಯವರ್ಧಿತ ಆಹಾರ ಉತ್ಪನ್ನಗಳನ್ನು ಖರೀದಿಸುತ್ತಿದ್ದಾರೆ. ಈ ಮೂಲಕ ಒಟ್ಟಾರೆ ಈವರೆಗೂ 1.37 ಕೋಟಿ ರೂ.ಹೆಚ್ಚು ವಹಿವಾಟು ನಡೆದಿದೆ.



ಪ್ರತಿ ತಿಂಗಳ 4ನೇ ಶನಿವಾರ ರೈತ ಸಂತೆಯನ್ನು ಆಯೋಜಿಸಲಾಗುತ್ತಿದೆ. ಈವರೆಗೂ ಒಟ್ಟು 10 ರೈತ ಸಂತೆಗಳು ಪೂರ್ಣಗೊಂಡಿದೆ. ಸ್ವತಃ ರೈತರೇ ಸಾವಯವವಾಗಿ ಬೆಳೆದ ತಾಜಾ ದ್ರಾಕ್ಷಿ, ಹಲಸು, ಮಾವು, ಕಲ್ಲಂಗಡಿ ಮೊದಲಾದ ಹಣ್ಣು, ತರಕಾರಿಗಳು, ಸಿರಿಧಾನ್ಯ, ಸಾವಯವ ಬೆಲ್ಲ, ಅಣಬೆ ಮೊದಲಾದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಾರೆ. ಜೊತೆಗೆ ತರಬೇತಿ ಪಡೆದ ಸ್ವ-ಸಹಾಯ ಸಂಘದ ಆಯ್ದ ಗುಂಪುಗಳು ಮೌಲ್ಯವರ್ಧಿತ ಆಹಾರ ಉತ್ಪನ್ನಗಳ ಮಾರಾಟ ಮತ್ತು ಪ್ರದರ್ಶನ ಮಾಡುತ್ತಾರೆ. ನಿಖರವಾದ ಬೆಲೆಯಲ್ಲಿ ಗುಣಮಟ್ಟದ ವಸ್ತುಗಳು ಸಿಗುವ ಕಾರಣ ಪ್ರತಿ ತಿಂಗಳು 20 ರಿಂದ 25 ಸಾವಿರ ಗ್ರಾಹಕರು ಆಗಮಿಸುತ್ತಿದ್ದು ರೈತ ಸಂತೆಗೆ ಬೇಡಿಕೆ ಹೆಚ್ಚುತ್ತಿದೆ ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ್ ತಿಳಿಸಿದರು.

ವಿಶ್ವವಿದ್ಯಾಲಯಗಳೆಂದರೆ ಕೇವಲ ಶಿಕ್ಷಣ, ಸಂಶೋಧನೆ ಮಾತ್ರ ಪರಿಭಾವನೆ ಇದೆ. ಹಾಗಾಗಿ ಇಲ್ಲಿನ ಕಾರ್ಯಚಟುವಟಿಕೆಗಳನ್ನು ಸಾರ್ವಜನಿಕರಿಗೆ ತೆರೆದಿಡಲು. ಇಲ್ಲಿನ ಉತ್ಪನ್ನಗಳು, ತರಬೇತಿ, ಕೃಷಿ ತಂತ್ರಜ್ಞಾನ, ಉಪಕರಣಗಳು, ಹೈನುಗಾರಿಕೆ ಮೊದಲಾದವುಗಳನ್ನು ಪರಿಚಯಿಸಲು ರೈತ ಸಂತೆ ಸಹಕಾರಿಯಾಗಿದೆ. ಮುಖ್ಯವಾಗಿ ಮಾರಾಟಗಾರರು ಹಾಗೂ ಗ್ರಾಹಕರ ನಡುವೆ ಉತ್ತಮ ವೇದಿಕೆ ಒದಗಿಸಲಿದೆ. ಗುಣಮಟ್ಟದ ತಾಜಾ ಉತ್ಪನ್ನಗಳ ಮಾರಾಟದ ಕಾರಣ ರೈತರಿಗೆ ಹೆಚ್ಚು ಆದಾಯವೂ ದೊರೆಯಲಿದೆ ಎಂದರು.

ತಾವು ಬೆಳೆದ ನೈಜ, ರಾಸಾಯನಿಕ ಮುಕ್ತ, ಸಾವಯವ ಹಣ್ಣು-ತರಕಾರಿ ಮಾರಾಟ, ಮಧ್ಯವರ್ತಿಗಳಿಲ್ಲದೇ ನೇರ ಮಾರಾಟ ಮೂಲಕ ಹೆಚ್ಚು ಲಾಭ, ತಮ್ಮ ಉತ್ಪನ್ನಗಳ ಅಭಿಪ್ರಾಯ ತಿಳಿದು ಸುಧಾರಣೆಗೆ ಸಹಕಾರಿ, ಉತ್ಪನ್ನಗಳ ಬ್ಯಾಂಡಿಂಗ್, ಮೌಲ್ಯವರ್ಧನೆ ಕುರಿತು ಮಾರ್ಗದರ್ಶನ, ನೇರವಾಗಿ ತಮ್ಮದೇ ಗ್ರಾಹಕರನ್ನು ಸೃಷ್ಟಿಸಿಕೊಳ್ಳಲು ಸಹಕಾರಿಯಾಗಲಿದೆ. ನೇರವಾಗಿ ರೈತರಿಂದ ಸಾವಯವ ಉತ್ಪನ್ನಗಳ ಖರೀದಿ, ಗ್ರಾಹಕರು ಹಾಗೂ ರೈತರ ನಡುವೆ ಉತ್ತಮ ಬಾಂಧವ್ಯ, ಸಮಯದ ಉಳಿತಾಯ, ಸ್ಥಳೀಯವಾಗಿ ಗ್ರಾಮೀಣ ಉತ್ಪನ್ನ ಲಭ್ಯತೆ, ವೈವಿಧ್ಯಮಯ ಕೃಷಿ ಉತ್ಪನ್ನಗಳ ಖರೀದಿಗೆ ಅವಕಾಶ, ಸ್ಥಳೀಯ ಆಹಾರ, ಸಂಸ್ಕೃತಿ ಪರಿಚಯವಾಗಲಿದೆ.

> ಗ್ರಾಮೀಣ ಸೊಗಡು ಪರಿಚಯಿಸುವುದರ ಜೊತೆಗೆ ಹಲವು ಪರಿಕಲ್ಪನೆಯೊಂದಿಗೆ ರೈತ ಸಂತೆ ಆಯೋಜಿಸಲಾಗುತ್ತಿದೆ. ರೈತರೇ ಬೆಳೆದ ಗುಣಮಟ್ಟದ ಉತ್ಪನ್ನಗಳು ನಿಖರ ಬೆಲೆಯಲ್ಲಿ ಸಿಗಲಿದೆ. ಹಾಗಾಗಿ ಗ್ರಾಹಕರ ಸಂಖ್ಯೆಯೂ ಹೆಚ್ಚುತ್ತಿದೆ. ಬಹುತೇಕ ರೈತರು, ಉತ್ಪಾದಕರಿಗೆ ಆನ್‌ಲೈನ್ ಮೂಲಕ ವಸ್ತುಗಳ ಕಳುಹಿಸುವಂತೆ ಬೇಡಿಕೆ ಸೃಷ್ಟಿಯಾಗಿದೆ.
>
> 
>
> ● ಡಾ.ಎಸ್.ವಿ.ಸುರೇಶ್. ಬೆಂಗಳೂರು ಕೃಷಿ ವಿವಿ ಕುಲಪತಿ

3 ಜಿಲ್ಲೆಗಳ ರೈತರಿಂದ ತಾಜಾ ಉತ್ಪನ್ನ ಮಾರಾಟ

ಕಳೆದ 2024 ಜೂನ್‌ನಲ್ಲಿ ಆರಂಭವಾಗಿರುವ ರೈತ ಸಂತೆಗೆ ಪ್ರತಿ ತಿಂಗಳು ಸಾವಿರಾರು ಮಂದಿ ಆಗಮಿಸುತ್ತಿದ್ದು, ಈವರೆಗೂ ರೈತರು ಒಳಗೊಂಡಂತೆ ಬರೋಬ್ಬರಿ 2.5 ಲಕ್ಷಕ್ಕೂ ಹೆಚ್ಚು ಗ್ರಾಹಕರು ಭೇಟಿ ನೀಡಿದ್ದಾರೆ. ರೈತ ಸಂತೆಗೆ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ಚಿಂತಾಮಣಿ, ದೊಡ್ಡಬಳ್ಳಾಪುರದಿಂದ ರೈತರು, ಉತ್ಪಾದಕರು ಆಗಮಿಸುತ್ತಿದ್ದಾರೆ. ಗ್ರಾಹಕರ ಪೈಕಿ ನಗರದ ಮಂದಿ ಅತಿ ಹೆಚ್ಚಾಗಿದೆ.

ಜಿಕೆವಿಕೆಯಲ್ಲಿ ನಾಳೆ 11ನೇ ರೈತ ಸಂತೆ

ವಿವಿ ಆವರಣದಲ್ಲಿ ಬೆಳಗ್ಗೆ 6.30 ರಿಂದ ಮಧ್ಯಾಹ್ನ 3 ಗಂಟೆವರೆಗೆ ಸಂತೆ ನಡೆಯಲಿದೆ. ನಗರದ ಮಕ್ಕಳು ಸಂತೆಯ ಪರಿಕಲ್ಪನೆಯನ್ನು ಆರಿಯಲಿದ್ದಾರೆ. ಫೆ.28 ರಂದು 4ನೇ ಶನಿವಾರ 11ನೇ ರೈತ ಸಂತೆ ನಡೆಯಲಿದೆ. ಉತ್ಪನ್ನಗಳ ಮಾರಾಟದ ಜೊತೆಗೆ ಆಕರ್ಷಕ ವಸ್ತುಗಳ ಪ್ರದರ್ಶನವು ಇರುವ ಕಾರಣ ಪೋಷಕರೊಂದಿಗೆ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ.

Uadyavani Pg.02

ತರಕಾರಿಯಲ್ಲಿ ವಿಷಕಾರಿ ಅಂಶ

■ **ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಬಯಲುಸೀಮೆ ಜಿಲ್ಲೆಗಳಲ್ಲಿ ಬೆಳೆದು ದೇಶದ ನಾನಾ ಭಾಗಗಳಿಗೆ ರವಾನಿಸುತ್ತಿರುವ ತರಕಾರಿಗಳಲ್ಲೂ ನೈಟ್ರೇಟ್ ಮತ್ತು ಸೀಸದ ಅಪಾಯಕಾರಿ ಅಂಶ ಇರುವುದು ಪತ್ತೆಯಾಗಿದೆ.

ನೀರು ವಿಷಕಾರಿ ಎಂಬ ವರದಿಗಳು ಆಗಾಗ್ಗೆ ಬರುತ್ತಲೇ ಇರುತ್ತವೆ. ಈಗ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯಲ್ಲಿ ತರಕಾರಿಯಲ್ಲೂ ವಿಷಕಾರಿ ಅಂಶ ಇರುವುದು ಪತ್ತೆಯಾಗಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ (ಸಿಪಿಸಿಬಿ) ಪ್ರಾದೇಶಿಕ ನಿರ್ದೇಶಕರ ನೇತೃತ್ವದ ಸಮಿತಿ ಕೋಲಾರ, ಬೆಂಗಳೂರು ಗ್ರಾಮಾಂತರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 72 ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಿದ್ದು, ಅದರಲ್ಲಿ 19ಕ್ಕೂ ಹೆಚ್ಚು ಮಾದರಿಗಳಲ್ಲಿ ವಿಷಕಾರಿ ಸೀಸ ಇರುವುದು ಸಂಶೋಧನಾ ವರದಿಯಲ್ಲಿ ಬಹಿರಂಗಗೊಂಡಿದೆ. ಇತ್ತೀಚೆಗೆ ಕೇಂದ್ರ ಸರಕಾರಕ್ಕೂ ಈ ವರದಿ ಸಲ್ಲಿಸಲಾಗಿದೆ.

ಮಣ್ಣೂ ಕಲುಷಿತ: ತರಕಾರಿ ಬೆಳೆಯುವ ಮಣ್ಣನ್ನೂ ಪರೀಕ್ಷೆಗೆ ಒಳಪಡಿಸಿದ್ದು, ಭಾರಿ ಪ್ರಮಾಣದಲ್ಲಿ ಕೀಟನಾಶಕ ಅಂಶ ಪತ್ತೆಯಾಗಿದೆ. ಸಂಗ್ರಹವಾದ ಮಣ್ಣು ಕೂಡ ಕಲುಷಿತ ಎಂದು ತಿಳಿದು ಬಂದಿದೆ. ಮಣ್ಣಿನಲ್ಲಿ ಹೆಚ್ಚಿನ ಪ್ರಮಾಣದ ಸೆಲೆನಿಯಮ್ ಪತ್ತೆ ಮತ್ತು ಅಂತರ್ಜಲದ ಮಾದರಿ ಮತ್ತು ಸಂಸ್ಕರಿಸಿದ ನೀರಿನ ಸಂಗ್ರಹವೂ ಮಲಿನವಾಗಿದೆ ಎಂದು ಸಮಿತಿ ವರದಿಯಲ್ಲಿ ಉಲ್ಲೇಖಿಸಿದೆ.



ವಿಶೇಷವಾಗಿ ಸೋರೆಕಾಯಿಯಲ್ಲಿ 1.75 ಎಂಜಿ, ಬದನೆಕಾಯಿಯಲ್ಲಿ 1.953 ಎಂಜಿ ಸೀಸ ಪತ್ತೆಯಾಗಿದೆ. ತೊಂಡೆಕಾಯಿಯಲ್ಲಿ ಮಿತಿಗಿಂತ ಸುಮಾರು 18 ಪಟ್ಟು ಹೆಚ್ಚು ಕಂಡುಬಂದಿದೆ.

ಚಪ್ಪರದ ಅವರೆಯಲ್ಲಿ 9 ಪಟ್ಟು, ಸೊಪ್ಪು ಮತ್ತು ಎಲೆಕೋಸಿನಲ್ಲಿ 5 ಪಟ್ಟು ಹೆಚ್ಚು ಸೀಸ ಪತ್ತೆಯಾಗಿದೆ. ಸೌತೆಕಾಯಿ, ಹೀರೆಕಾಯಿ, ದಪ್ಪ ಮೆಣಸಿನಕಾಯಿ, ಬೀಟ್ರೂಟ್, ಹಾಗಲಕಾಯಿ, ನವಿಲುಕೋಸು ಮತ್ತು ಮೆಣಸಿನಕಾಯಿ, ಬಜ್ಜಿ ಮೆಣಸಿನಕಾಯಿ ಮಾದರಿಗಳಲ್ಲೂ ಸೀಸದ ಅಂಶ ಮಿತಿ ಮೀರಿದೆ ಎಂದು ಸಮಿತಿಯ ವರದಿಯಲ್ಲಿ ತಿಳಿಸಲಾಗಿದೆ. ಅಂತರ್ಜಲ ಕುಸಿತ ಹಾಗೂ ವ್ಯಾಲಿ ಯೋಜನೆಯಡಿ ಹರಿಯುತ್ತಿರುವ ಅರೆಬರೆ ಸಂಸ್ಕರಿತ ನೀರು ಇದಕ್ಕೆ ಕಾರಣವಾಗಿರಬಹುದು ಎಂದು ವಿಶ್ಲೇಷಿಸಲಾಗಿದ್ದು, ಈ ವರದಿಯನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ನೀರಾವರಿ ಹೋರಾಟಗಾರರು ಆಗ್ರಹಿಸಿದ್ದಾರೆ.

Vijaya Karnataka Pg.03

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ' ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ,
ನಾಯಕ್ ಭವನ, ಗಾಕೃವಿಕೆ. ಬೆಂಗಳೂರು-560 065.

ಸಂಖ್ಯೆ.ಇ.ಒ/ಎಸ್.ಪಿ.ಒ/ಕೆಪಿಪಿಪಿ/18/2025-26 ದಿನಾಂಕ: 24-02-2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳು ಸರಬರಾಜು ಮಾಡಲು ಕೆ.ಜಿ-2, ಟೆಂಡರ್ ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: (1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 07.03.2026ರ ಸಂಜೆ 4:00 ಘಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.03.2026ರ ಬೆಳಿಗ್ಗೆ 10:30 ಕ್ಕೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.03.2026ರ ಬೆಳಿಗ್ಗೆ 10:30ಕ್ಕೆ. ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇ ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಚೇರಿಯನ್ನು, ಕಚೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ: **91-8046010000, + 91-8068948777, support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: **23630128** ಸಂಪರ್ಕಿಸಬಹುದು.

ಸಹಿ/-
ಆಸ್ತಿ ಅಧಿಕಾರಿಗಳು

DIPR/CP/RO5884/AAPL/2025-26

Prajavani Pg.4